ಇದ್ದ. ಮತ್ತೆ ಅವನ ಮಡದಿ ಬಂದು ಅವನನ್ನು ಊಟಕ್ಕೆ ಬರಲು ಒತ್ತಾಯಿಸಿದಳು. ಈಗ ರೈತನು ರೇಗಿ ಗುದ್ದಲಿಯಿಂದ ಅವಳನ್ನು ಹೊಡೆಯುವುದಕ್ಕೇ ಹೋದನು. ಹೀಗೆ ಅವನು ಸಂಜೆಯವರೆಗೂ ಎಡೆಬಿಡದೆ ಕೆಲಸ ಮಾಡಿ ಹೊಲಕ್ಕೆ ನೀರು ಬರುವಂತೆ ಮಾಡಿದನು. ನೀರು ಜುಳುಜುಳು ಎಂದು ಹರಿಯುವುದನ್ನು ನೋಡಿ ಸಂತೋಷದಿಂದ ಮನೆಗೆ ಹಿಂತಿರುಗಿ, ಸ್ನಾನ ಊಟ ಮಾಡಿ ನೆಮ್ಮದಿಯಿಂದ ಮಲಗಿ ನಿದ್ರಿಸಿದನು.

ಎರಡನೆಯ ರೈತನೂ ಇದೇ ರೀತಿ ಹೊಲಕ್ಕೆ ನೀರು ತರಲು ಹೋದ. ಆದರೆ ಮಡದಿ ಬಂದು ಟೀ ಕುಡಿಯಲು ಬನ್ನಿ, ಸ್ನಾನಕ್ಕೆ ಬನ್ನಿ ಎಂದು ಕರೆದಾಗಲೆಲ್ಲ ಹೋಗುತ್ತಿದ್ದ. ಆದ್ದರಿಂದ ಅವನು ನೀರನ್ನು ತರುವುದರಲ್ಲಿ ಯಶಸ್ವಿಯಾಗಲೇ ಇಲ್ಲ.

ಆಸೆಗಳ ನಿಗ್ರಹ ದೇಶದ ಆರ್ಥಿಕ ಪ್ರಗತಿಗೂ ಪೂರಕವಾಗಬಲ್ಲದು. ಅನಿಯಂತ್ರಿತ ಆಸೆಗಳು ಪ್ರಾರಂಭದಲ್ಲಿ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಂಡುಬಂದರೂ ಮುಂದೆ ಅವು ಮಾರಕವಾಗುವುದು ಸ್ವಾಭಾವಿಕ. ಏಕೆಂದರೆ ಆಸೆಗಳ ಹೆಚ್ಚಳ ಜನರಲ್ಲಿ ಹಣದಾಸೆಯನ್ನು ಹೆಚ್ಚಿಸಿ, ಅದನ್ನು ಗಳಿಸಲು ಅವರು ಅನೈತಿಕ ಮಾರ್ಗವನ್ನು ಅನುಸರಿಸುವಂತೆ ಪ್ರೇರೇಪಿಸುತ್ತದೆ. ಅನೈತಿಕತೆ ಸಮಾಜವನ್ನು ಅಸ್ಥಿರಗೊಳಿಸಿ, ಕ್ರಮೇಣ ಸಮಾಜದಲ್ಲಿ ಅರಾಜಕತೆಯನ್ನು ನಿರ್ಮಿಸುತ್ತದೆ, ಮತ್ತು ಈ ಅರಾಜಕತೆ ಆರ್ಥಿಕತೆಗೆ ಕುಠಾರಪ್ರಾಯವಾಗುತ್ತದೆ. ಅಮೆರಿಕದಲ್ಲಿ ಇತ್ತೀಚೆಗಿನ ಆರ್ಥಿಕ ಧೋರಣೆಯನ್ನು ಅಧ್ಯಯನ ಮಾಡಿದ ಹೂವರ್ ಆಯೋಗದ ವರದಿ ಹೀಗೆ ಹೇಳುತ್ತದೆ: "ಮಾನವನ ಆಸೆಗಳಿಗೆ ಅಂತ್ಯವಿಲ್ಲ. ಪೂರ್ತಿಯಾದ ಕೂಡಲೇ ಹೊಸ ಆಸೆಗಳನ್ನು ಸೃಷ್ಟಿಸದ ಯಾವುದೇ ಆಸೆಯೂ ಇಲ್ಲ."

ಯಶಸ್ಸು ಎಂದರೆ ಆರ್ಥಿಕ, ಔದ್ಯೋಗಿಕ, ರಾಜಕೀಯ ಮುಂತಾದ ಯಾವುದೋ ಕ್ಷೇತ್ರದಲ್ಲಿ ಯಶಸ್ಸನ್ನು ಪಡೆಯುವುದೆಂದಲ್ಲ. ಮಾನವನು ಒಬ್ಬ ವ್ಯಕ್ತಿಯಾಗಿ ಸಮಾಜದ ಇತರರೊಡನೆಯೂ ಅಂತರಂಗದಲ್ಲಿ ತನ್ನ ವ್ಯಕ್ತಿತ್ವದ ಹಲವಾರು ಅಂಶಗಳೊಡನೆಯೂ ಸಾಮರಸ್ಯದಿಂದ ಬಾಳುವುದೇ ನಿಜವಾದ ಯಶಸ್ಸು.

**ಯಶಸ್ಸಿನ ಕುಟುಂಬ**

- **ಯಶಸ್ಸಿನ ತಂದೆ ಕೆಲಸ.**
- **ಯಶಸ್ಸಿನ ತಾಯಿ ಮಹತ್ವಾಕಾಂಕ್ಷೆ.**
- **ಹಿರಿಯ ಮಗ ವ್ಯಾವಹಾರಿಕ ಪ್ರಜ್ಞೆ.**
- **ಇತರ ಸಹೋದರರು: ಸತತ ಪ್ರಯತ್ನ, ಪ್ರಾಮಾಣಿಕತೆ, ದಕ್ಷತೆ, ಮುಂದಾಲೋಚನೆ, ಉತ್ಸಾಹ ಮತ್ತು ಸಹಕಾರ.**
- **ಹಿರಿಯ ಮಗಳು ಶೀಲ.**
- **ಅವಳ ಸೋದರಿಯರು : ಹುರುಪು, ವಿಧೇಯತೆ, ಎಚ್ಚರಿಕೆ, ಸೌಜನ್ಯ, ಮಿತವ್ಯಯ ಮತ್ತು ಸಾಮರಸ್ಯ.**

*—Food for the Thinking Mind*

## ಪ್ರಹಸನ ಪ್ರಸಂಗ

ನಮ್ಮಲ್ಲಿ ಎಷ್ಟು ಸ್ವಂತಿಕೆ ಇರುತ್ತದೆ? ನಮ್ಮ ವಿಚಾರಗಳು, ವರ್ತನೆಗಳು, ಕ್ರಿಯೆಗಳು ಎಷ್ಟು ಸ್ವತಂತ್ರವಾಗಿರುತ್ತವೆ? ಇದನ್ನು ನಾವು ಸೂಕ್ಷ್ಮವಾಗಿ ವಿಮರ್ಶಿಸಿ ನೋಡಿದಾಗ ನಾವು ಎಷ್ಟೊಂದು ಇತರರಿಗೆ, ಹೊರಗಿನ ಸನ್ನಿವೇಶಗಳಿಗೆ ಗುಲಾಮರಾಗಿದ್ದೇವೆ ಎಂಬುದು ತಿಳಿದು ನಮಗೇ ನಾಚಿಕೆಯಾಗುತ್ತದೆ. ನಾವು ಚಲಿಸುವ ವಿಶ್ವಕೋಶದಂತಿರಲು ಬಯಸದೆ, ಸ್ವತಂತ್ರ ವಿಚಾರಕೋಶದಂತಿರಲು ಬಯಸಬೇಕು.

ತತ್ತ್ವಜ್ಞಾನಿಯೊಬ್ಬನು ತನ್ನ ಪಾದರಕ್ಷೆಯನ್ನು ಚಮ್ಮಾರನಿಗೆ ದುರಸ್ತಿ ಮಾಡಲು ಕೊಟ್ಟು "ಈಗಲೇ ರಿಪೇರಿ ಮಾಡಿಕೊಡು" ಎಂದು ಹೇಳಿದನು.

"ಈಗ ಸಮಯವಿಲ್ಲ, ಅಂಗಡಿ ಮುಚ್ಚುವ ಸಮಯ. ನಾಳೆ ಬನ್ನಿ ರಿಪೇರಿ ಮಾಡಿಡುತ್ತೇನೆ," ಎಂದ ಚಮ್ಮಾರ.

"ನನ್ನ ಹತ್ತಿರ ಒಂದೇ ಜೊತೆ ಪಾದರಕ್ಷೆ ಇರುವುದು ಕಣಯ್ಯ. ಮತ್ತೆ ಪಾದರಕ್ಷೆ ಇಲ್ಲದೆ ನಡೆಯಲಾರೆ" ತತ್ತ್ವಜ್ಞಾನಿ ಒತ್ತಾಯಿಸಿದ.

ಆಗ ಚಮ್ಮಾರ ಹೇಳಿದ : "ನಾನು ಒಂದು ದಿನದ ಮಟ್ಟಿಗೆ ಹಾಕಿಕೊಳ್ಳಲು ನನ್ನ ಹತ್ತಿರ ಇರುವ ಒಂದು ಜೊತೆ ಪಾದರಕ್ಷೆ ಕೊಡುತ್ತೇನೆ."

"ಏನು! ಬೇರೆಯವರ ಪಾದರಕ್ಷೆ ಹಾಕಿಕೊಳ್ಳುವುದೆ? ಏನೆಂದು ಕೊಂಡಿದ್ದೀಯೆ?" ತತ್ತ್ವಜ್ಞಾನಿ ಕೋಪದಿಂದ ನುಡಿದ. ಚಮ್ಮಾರನು ಸ್ವಲ್ಪವೂ ವಿಚಲಿತನಾಗದೆ ತತ್ತ್ವಜ್ಞಾನಿಯ ಮುಖವನ್ನೇ ದಿಟ್ಟಿಸಿ ನೋಡುತ್ತ ಹೇಳಿದ : "ಅಲ್ಲ ಸ್ವಾಮಿ, ನೀವು ನಿಮ್ಮ ತಲೆಯಲ್ಲಿ ಬೇರೆಯವರ ವಿಚಾರಗಳನ್ನು ಹೊತ್ತು ತಿರುಗುತ್ತೀರಿ, ಆದರೆ ಕಾಲಿಗೆ ಬೇರೆಯವರ ಪಾದರಕ್ಷೆ ಹಾಕಿಕೊಂಡು ಓಡಾಡುವುದಕ್ಕೆ ಆಗೋದಿಲ್ವೆ?"

O O O

**ಒಂ**ದು ಜೈಲು. ರಾಮನವಮಿಯ ದಿನ ರಾತ್ರಿ ಅಲ್ಲಿ ಕೈದಿಗಳೆಲ್ಲ ಸೇರಿ "ಸಂಪೂರ್ಣ ರಾಮಾಯಣ" ನಾಟಕವನ್ನು ಆಡಿದರು. ಮರುದಿನ ಬೆಳಗ್ಗೆ ಒಬ್ಬ ಪೇದೆ ಬಂದು ಜೈಲಿನ ಮುಖ್ಯಾಧಿಕಾರಿಗೆ ಈ ವಿಷಯವನ್ನು ತಿಳಿಸಿದ.

ಮುಖ್ಯಾಧಿಕಾರಿ : "ನಾಟಕ ಹೇಗಿತ್ತು?"

ಪೇದೆ : "ಚೆನ್ನಾಗಿತ್ತು, ಸಾರ್. ಆದರೆ...."

ಮುಖ್ಯಾಧಿಕಾರಿ : "ಆದರೆ ಏನು! ಏನಾಯಿತು?"

ಪೇದೆ : "ಏನಿಲ್ಲ, ಆಂಜನೇಯನ ಪಾತ್ರ ಮಾಡಿದ ಕೈದಿ ಸಂಜೀವಿನಿ ಪರ್ವತ ತರಲು ಹೋದವನು ಇನ್ನೂ ಬರಲೇ ಇಲ್ಲ."

ನಮ್ಮ ಪ್ರಜ್ಞೆಯೂ ಯಾವಾಗಲೂ ಹೊರಗೆ ಓಡಿಹೋಗಲು ಪ್ರಯತ್ನಿಸುತ್ತಿರುತ್ತದೆ. ಯಾವುದಾದರೂ ಆಲೋಚನೆಯ ಬಾಗಿಲಿನ ಮೂಲಕ ನುಸುಳಿಕೊಂಡು ಓಡಿಹೋಗುತ್ತದೆ. ನಾವು ಧ್ಯಾನದ ಸಮಯದಲ್ಲಿ ಅದನ್ನು ನಮ್ಮೊಳಗೇ ಓಡಟರಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ಅದು ಯಾವುದಾದರೂ ಆಲೋಚನೆಯ ಎಳೆಯನ್ನು ಹಿಡಿದುಕೊಂಡು ಹೊರಗೆ ತಪ್ಪಿಸಿಕೊಂಡು ಹೋಗುತ್ತದೆ.